

ಮಾತಿಲ್ಲ. ಮಧ್ಯೆ ಮಧ್ಯೆ ಕಡಿಮೆಯಾದಂತಾದರೂ ಮರುಕ್ಷಣವೇ ಮತ್ತೆ ಧೋ. ಎಂದು ಸುರಿಯುತ್ತಿದೆ. ಮೈ- ಮನಸ್ಸಿಗೆ ಪಾಚಿಗಟ್ಟಿದ ಅನುಭವ' ಕೊನೇರಿ ಸ್ವಗತವೆಂಬಂತೆ ಅಂದು ಮುಖ ಕಿವುಚಿದ. ಅಲ್ಲವನಿಗೆ ಹೆಚ್ಚುಹೊತ್ತು ಕೂರುವ ಮನಸ್ಸಾಗಲಿಲ್ಲ. ಮಳೆಯ ಇರಿಚಲಿನಿಂದ ಅವನ ಬಟ್ಟೆ ಒದ್ದೆಯಾಗಿದ್ದರಿಂದ ಚಳಿಹಿಡಿದಿತ್ತು. ನಡುಗುತ್ತ ಎದ್ದು ಶಿಬಿರದ ಹೊರಭಾಗದ ಮೂಲೆಯ ದಿಂಡಲು ಮರದ ಕೆಳಗೆ ಹಾಕಿದ್ದ ಕೆಂಡದ ಗುಪ್ಪೆಯೆಡೆಗೆ ಬಂದ. ಅದೂ ಮಳೆಗೆ ಅರೆಬರೆ ತೊಯ್ದದ್ದರಿಂದ ಅದರಿಂದ ಹೊಗೆಯೆದ್ದಿತ್ತು. ಕೊನೇರಿ ಅಲ್ಲಿಯೇ ಬಿದ್ದಿದ್ದ ಗೇಣುದ್ದದ ಕಡ್ಡಿಯ ತುಂಡೊಂದನ್ನು ಕೈಗೆತ್ತಿಕೊಂಡು ಕೆಂಡದ ಗುಪ್ಪೆ ಕೆದರಿದ, 'ಪರವಾಗಿಲ್ಲ ಇನ್ನೂ ಸ್ವಲ್ಪ ಬೆಂಕಿ ಇದೆ' ಎಂದು ಅದರ ಮುಂದೆ ಕುಕ್ಕರಗಾಲಿನ ಮೇಲೆ ಕುಳಿತು ಕೈಯಗಲಿಸಿ ಬೆಂಕಿ ಕಾಯಿಸಿಕೊಳ್ಳತೊಡಗಿದ. ಅವನ ತಂಬಲುಮೈ ಕ್ಷಣಕ್ಷಣಕ್ಕೂ ಕಾವೇರುತ್ತಲೇ ಅವನಿಗೆ ಹಿತವೆನಿಸಿತು. ಕೆಲಹೊತ್ತಿನ ನಂತರ ಶಿಬಿರದೊಳಕ್ಕೆ ಬಂದ.

ಅದುವರೆಗೂ ಶಿಬಿರದ ಪಡಸಾಲೆಯಲ್ಲಿ ಉರಿಯುತ್ತಿದ್ದ ಸೋಲಾರ್‌ನ ಚಾರ್ಜ್ ಕಡಿಮೆಯಾಗಿ ಬಲ್ಬು ಮಂದವಾಗಿ ಉರಿಯುತ್ತಿತ್ತು. ಒಳಕೋಣೆಯೊಳಗಿನ ಬಲ್ಬು ಕಣ್ಣು ಮುಚ್ಚಿ-ತೆರೆದಂತೆ ಮಾಡುತ್ತಿದ್ದರಿಂದ ಅಲ್ಲಿ ಅರ್ಧ ಬೆಳಕು, ಅರ್ಧ ಕತ್ತಲೆಯ ವಾತಾವರಣ. ಪಡಸಾಲೆಯ ಚಾವಣಿಯಿಂದ ಮಳೆಹನಿಗಳು ಕೆಳಗೆ ಇರಿಸಿದ್ದ ಪಾತ್ರೆ ಪಗಡೆಗಳಿಗೆ ಟಪ್ ಟಪ್ ಎಂದು ಬೀಳತೊಡಗಿದ್ದವು. ಕೊನೇರಿಗೆ ಈ ಸದ್ದಿನಿಂದ ಕಿವಿಗೆ ಮೊಳೆಹೊಡೆದಂತಾಗುತ್ತಿತ್ತು. ಅಲ್ಲಲ್ಲಿ ನೆಲದ ಮೇಲೆ ಸೋರಿ ಹೋಗುತ್ತಿದ್ದ ನೀರನ್ನು ಬಟ್ಟೆಯಿಂದ ಒರೆಸತೊಡಗಿದ. ಬಾಗಿಲು ಕಿಟಕಿಗೆದುರಾಗಿ ಜೋರಾಗಿ ಗಾಳಿ ಬೀಸಿತೇನೋ ಒಳನುಗ್ಗಿದ ಇರಿಚಲು ಸಿಡಿದು, ಕೊನೇರಿಗೆ ಈಗ ಮತ್ತೆ ಚಳಿ ಹಿಡಿದಂತಾಯ್ತು. ಒದ್ದೆ ಬಟ್ಟೆ ಕಳಚಿ ಬೇರೆ ಬಟ್ಟೆ ಹಾಕಿಕೊಳ್ಳಲೆಂದು ಮೂಲೆಯಲ್ಲಿ ನೇತುಹಾಕಿದ್ದ ಬೆತ್ತದ ಕೋಲಿನೆಡೆಗೆ ನೋಡಿದ. ಅದರ ಮೇಲಿನ ಖಾಕಿ ಪ್ಯಾಂಟು, ಅದೇ ಬಣ್ಣದ ಮಧ್ಯದ ಗುಂಡಿ ಕಳಚಿಹೋಗಿದ್ದ ಉದ್ದ ತೋಳಿನ ಶರ್ಟು ಒಣಗಲು ಹಾಕಿ ಮೂರು